ಅ) ಸರ್ಕಾರ ಇದುವರೆವಿಗೂ ಈ ಆಯೋಗಕ್ಕೆ ಮಾಡಿರುವ ಖರ್ಚು ಎಷ್ಟು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) :

ಅ) ಹೌದು.

ಆ) ವಿವರಗಳು ಈ ಕೆಳಕಂಡಂತಿವೆ :

ಆರ್ಥಿಕ ವರ್ಷ	ಒದಗಿಸಲಾಗಿರುವ ಅನುದಾನ (ರೂ.ಲಕ್ಷಗಳಲ್ಲಿ)	ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ)
1996-97	20.00	20.00
1997-98	50.00	25.00
1998-99	40.00	40.00
1999-2000	40.00	40.00

ಅಂಗನವಾಡಿ ಕಾರ್ಯಕರ್ತೆಯರ ಗೌರವಧನ ಹೆಚ್ಚಿಸುವ ಬಗ್ಗೆ

541- ಶ್ರೀ ಸದಾನಂದಗೌಡ ಡಿ.ವಿ. (ಪುತ್ತೂರು) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಂಗನವಾಡಿ ಕಾರ್ಯಕರ್ತೆಯರ ಗೌರವಧನ ಹೆಚ್ಚಳದ ಬಗ್ಗೆ ತೆಗೆದುಕೊಂಡ ಕ್ರಮವೇನು?

ಆ) ಅವರಿಗೆ ನಿಗಧಿಪಡಿಸಿರುವ ಗೌರವಧನವು ಕನಿಷ್ಠ ವೇತನ ಕಾಯಿದೆಯನ್ವಯ ಇದೆಯೇ?

ಇ) ಇಲ್ಲದಿದ್ದಲ್ಲಿ ಕನಿಷ್ಠ ವೇತನ ಕಾಯಿದೆಯನ್ವಯ ಗೌರವಧನವನ್ನು ಪಾವತಿಸದೇ ಇರಲು ಕಾರಣವೇನು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು.) :

ಅ) ಇತ್ತೀಚಿಗೆ ಅಂದರೆ ದಿನಾಂಕ : 1-6-99 ರಿಂದ ಅನ್ವಯವಾಗುವಂತೆ ಮಾಹೆಯಾನ ಅಂಗನವಾಡಿ ಕಾರ್ಯಕರ್ತೆಯರಿಗೆ ರೂ.150.00 ಮತ್ತು ಸಹಾಯಕರಿಗೆ ರೂ.75.00 ಗಳಂತೆ ಹೆಚ್ಚಿಸುವುದಕ್ಕೆ ಸರ್ಕಾರದ ಆದೇಶ ದಿನಾಂಕ : 6-7-99 ರಲ್ಲಿ ಮಂಜೂರಾತಿ ನೀಡಿದೆ.

ಆ) ಇಲ್ಲ.

ಇ) ಭಾರತ ಸರ್ಕಾರದ ಮಾರ್ಗಸೂಚಿಗಳಂತೆ ಅಂಗನವಾಡಿ ಕಾರ್ಯಕರ್ತೆಯರು ಗೌರವಧನ ಆಧಾರಿತ ಕಾರ್ಯಕರ್ತೆಯರಾಗಿರುತ್ತಾರೆ. ಆದ್ದರಿಂದ ಕನಿಷ್ಠ ವೇತನ ಕಾಯಿದೆಯು ಇವರಿಗೆ ಅನ್ವಯಿಸುವುದಿಲ್ಲ.